


ಪರಿವಾರದವರು ಗಾಂಧಿಯನ್ನು ಹುಡುಕುತ್ತಲೇ ಇಲ್ಲ, ಹೀಗಿರುವಾಗ ಅವರೆಲ್ಲಿಗೆ ಹೋಗುವುದು?

ಮೂಲ:
**ಜ್ಞಾನ್ ಚತುರ್ವೇದಿ**

ಕನ್ನಡಕ್ಕೆ:
**ಡಿ.ಎನ್.ಶ್ರೀನಾಥ್**

ಗಾಂಧೀಜಿಯವರ ಪ್ರತಿಮೆ ಒಂದು ಜನಭರಿತ ಸರ್ಕಲ್‌ನಲ್ಲಿದೆ. ನಾಲ್ಕೂ ಕಡೆ ಅಂಗಡಿಗಳು, ಟೆಂಪೋಗಳು, ಮಿನಿ ಬಸ್‌ಗಳು, ಕೈಗಾಡಿಗಳು, ಬಂಡಿ ಗಾಡಿಗಳು. ಗುಂಪು ಹಾರ್ನ್ ಗಳ ಶಬ್ದ. ಕಾರುಗಳು. ಗದ್ದಲ, ಜೀಪ್‌ಗಳು, ಹೊಗೆ, ಧೂಳು–ಮಣ್ಣು. ಗಾಂಧೀಜಿಯ ಸುತ್ತಮುತ್ತ ಹಗಲಿಡೀ ಇದೇ ಗದ್ದಲ ರಂಪಾಟ. ಅವರು ಪ್ರತಿಮೆಯಲ್ಲಿ ಕೈದಾಗಿ ಎಲ್ಲವನ್ನೂ ನೋಡುತ್ತಿದ್ದಾರೆ. ಇವನ್ನೆಲ್ಲ ತಡ ರಾತ್ರಿಯವರೆಗೂ ನೋಡಿ ನೋಡಿ, ನಿಂತು–ನಿಂತು ದಣಿದು ಬಿಡುತ್ತಾರೆ. ಪ್ರತಿಮೆ ನಿಂತಿರಬೇಕಲ್ಲ!

ಅಂದು ರಾತ್ರೆ, ದಣಿದ ಗಾಂಧೀಜಿ ಪ್ರತಿಮೆಯಿಂದ ಹೊರಬಂದರು. ಹೆಚ್ಚು ದೂರ ಹೋಗಲಿಲ್ಲ. ಈ ದಿನಗಳಲ್ಲಿ

ಗಾಂಧೀಜಿಯವರು ಪ್ರತಿಮೆಗೆ ಮಾತ್ರ ಸೀಮಿತವಾಗಿದ್ದರೆ ಉಚಿತವೆನಿಸುತ್ತದೆ. ಈ ವಿಷಯ ಗಾಂಧೀಜಿಯವರಿಗೂ ತಿಳಿದಿದೆ.

ಬೇರೆಲ್ಲೇ ಹೋಗುವುದು 'ರಿಸ್ಕ್ ಜಾಬ್'. ಗಾಂಧೀಜಿಯವರು ಅಲ್ಲಿಯೇ ಪ್ರತಿಮೆಯ ಗೋಳಾಕಾರದಲ್ಲಿ ಕಟ್ಟಿದ ಜಗಲಿಯ ಮೇಲೆ ಕೂತರು. ಕೂತು ತೂಕಡಿಸಿದರು ಅಥವಾ ಬಹುಶಃ ಹೀಗೇ ಕಣ್ಣುಗಳನ್ನು ಮುಚ್ಚಿಕೊಂಡು ಯೋಚಿಸುತ್ತಿದ್ದರು.

ರಾತ್ರಿ ದಟ್ಟವಾಗಿದೆ. ಸರ್ಕಲ್‌ನಲ್ಲಿ ನಿಶ್ಶಬ್ದ ಆವರಿಸಿದೆ. ಅಂಗಡಿಗಳು ಮುಚ್ಚಿವೆ. ಕೈಗಾಡಿಗಳನ್ನು ಮುಚ್ಚಿ ರಸ್ತೆಯ ಬದಿಯಲ್ಲಿ ನಿಲ್ಲಿಸಲಾಗಿದೆ. ಒಂದೆರಡು ಗಾಡಿಗಳನ್ನು ಹೊರತುಪಡಿಸಿ ರಸ್ತೆ ನಿರ್ಜನವಾಗಿದೆ. ಎಲ್ಲೆಲ್ಲೂ ಮೌನ. ನಗರವೂ ದಣಿದು ನಿದ್ರಾವಶವಾಗಿದೆ. ಹಾಗಂತ ನಗರ ಗಾಂಧೀಜಿಯವರಂತೆ ದಣಿಯುವುದಿಲ್ಲ. ಆದರೆ ಗಾಂಧೀಜಿಯವರು ಎಲ್ಲವನ್ನು ನೋಡಿ, ಆ ಬಗ್ಗೆ ಯೋಚಿಸಿ–ಯೋಚಿಸಿ ಏನೂ ಮಾಡಲಾಗದೆ ಪ್ರತಿಮೆಯಾಗಿ ನಿಲ್ಲುವ ವಿವಶತೆಯಲ್ಲಿ ದಣಿದು ಬಿಡುತ್ತಾರೆ.